RNU AIR DHARWAD

OCTOBER 10, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

**ಮುಖ್ಯಾಂಶಗಳು**

- **ಇಂದು,ವಿಶ್ವ ಮಾನಸಿಕ ಆರೋಗ್ಯ ದಿನ**; ಮನೋಚೈತನ್ಯ ತಾಲೂಕು ಆಸ್ಪತ್ರೆ ಕ್ಲಿನಿಕ್‌ಗಳಲ್ಲಿ, ಮನೋ ಆರೋಗ್ಯ ಚಿಕಿತ್ಸಾ ಶಿಬಿರ.
- **ಮನೋದರ್ಪಣ ಪರಿಚರ್ಚಾ ವೆಬಿನಾರ್**; PM e-Vidya ಚಾನೆಲ್‌ನಲ್ಲಿ, ಪ್ರತಿ ಶುಕ್ರವಾರ ಮಧ್ಯಾಹ್ನ 2.30ಕ್ಕೆ ಪ್ರಸಾರ.
- **ಸುದೃಢಭಾರತ 2047**; 'ತಂಬಾಕು ಮುಕ್ತ, 60 ದಿನಗಳ ಯುವ ಅಭಿಯಾನ'ಕ್ಕೆ, ಕೇಂದ್ರ ಚಾಲನೆ.
- **ಮಂಗಳೂರು ಕಡಲ ತೀರದಲ್ಲಿ**, ಭಾರತೀಯ ಕರಾವಳಿ ಕಾವಲು ಪಡೆ, ಯಶಸ್ವಿ ಸಮರಾಭ್ಯಾಸ.

<><><>

**ಇಂದುವಿಶ್ವ ಮಾನಸಿಕ ಆರೋಗ್ಯ** ದಿನಾಚರಣೆ. 'ದುರಂತ ಮತ್ತು ತುರ್ತು ಪರಿಸ್ಥಿತಿಯಲ್ಲಿ, ಮಾನಸಿಕ ಆರೋಗ್ಯ ಹಾಗೂ ಸೇವೆಗಳಿಗೆ ಆದ್ಯತೆ' ಧ್ಯೇಯದೊಂದಿಗೆ, ಮಾನಸಿಕ ಆರೋಗ್ಯ ವಿಶ್ವ ಸಂಘಟನೆ, ಸಮುದಾಯಗಳಿಗೆ ಮಾನಸಿಕ ಆರೋಗ್ಯ ಒದಗಿಸಿ, ಮನೋಬಲ ಧೃಡೀಕರಿಸುವ ಗುರಿ ಹೊಂದಿದೆ.

<><><>

**ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ**, ಈ ತಿಂಗಳ 28ರ ವರೆಗೆ, ಮನೋ ಆರೋಗ್ಯ ಶಿಬಿರಗಳು, ರಾಜ್ಯಾದ್ಯಂತ, ಮನೋಚೈತನ್ಯ ತಾಲೂಕು ಆಸ್ಪತ್ರೆ ಕ್ಲಿನಿಕ್‌ಗಳಲ್ಲಿ ಆಯೋಜಿತವಾಗಿವೆ. ಸಮುದಾಯದಲ್ಲಿ, ಮಾನಸಿಕ ಕಾಯಿಲೆಯ ಲಕ್ಷಣ ಹೊಂದಿರುವ ವ್ಯಕ್ತಿಗಳನ್ನು ಗುರುತಿಸಿ, ಈ ಶಿಬಿರಕ್ಕೆ ಕರೆ ತಂದು, ತಜ್ಞ ವೈದ್ಯರಿಂದ ತಪಾಸಣೆ ಮಾಡಿಸಿ, ಸೂಕ್ತ ಚಿಕಿತ್ಸೆ ನೀಡಬಹುದಾಗಿದೆ.ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಉತ್ತರಕನ್ನಡ ಜಿಲ್ಲೆ, ಮಾನಸಿಕ ಆರೋಗ್ಯ ಅಧಿಕಾರಿ, ಡಾಕ್ಟರ್ ಸುಹಾಸ.

<><><>

**ರಾಷ್ಟ್ರೀಯ ಮಾನಸಿಕ ಆರೋಗ್ಯ ಸಪ್ತಾಹ**, ಇಂದು ಮುಕ್ತಾಯವಾಗಲಿದೆ. "ಸಮುದಾಯ ಒಟ್ಟಾಗಿ, ಮಾನಸಿಕ ಯೋಗಕ್ಷೇಮವನ್ನು ಬೆಂಬಲಿಸುವುದು" ಎಂಬ ಧ್ಯೇಯದೊಂದಿಗೆ, ಕೇಂದ್ರ ಶಿಕ್ಷಣ ಸಚಿವಾಲಯ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಹಯೋಗದಲ್ಲಿ, ಮನೋದರ್ಪಣ ಪರಿಚರ್ಚಾ ವೆಬಿನಾರ್, ಪ್ರಸಾರ ಮಾಡುತ್ತಿದೆ.

<><><>

**ಪ್ರತಿ ಶುಕ್ರವಾರ ಮಧ್ಯಾಹ್ನ 2:30** ರಿಂದ ಸಂಜೆ 4 ಗಂಟೆಯ ವರೆಗೆ, ಎಲ್ಲ ಶಾಲೆಗಳಲ್ಲಿ, ಮಾನಸಿಕ ಆರೋಗ್ಯ ತಜ್ಞರೊಂದಿಗೆ ಕೈಗೊಂಡ, ಸಂವಾದಗಳನ್ನು, PM e-Vidya ಚಾನೆಲ್, N.C.E.R.T. YouTube ಚಾನೆಲ್‌ನಲ್ಲಿ ಪ್ರಸಾರ ಮಾಡಲಾಗುತ್ತಿದೆ.

<><><>

**ವಿದ್ಯಾರ್ಥಿಗಳಿಗಾಗಿ, ಮನೋದರ್ಪಣ ಸಹಾಯವಾಣಿ** 844–844–0632 ಹಾಗೂ ಜಾಲತಾಣ, manodarpan.education.gov.in ಮಾನಸಿಕ ಆರೋಗ್ಯದ ಕುರಿತು ಸಮಾಲೋಚನೆ, ಮಾರ್ಗದರ್ಶನ ಮತ್ತು ಸಂಪನ್ಮೂಲಗಳಿಗಾಗಿ ಲಭ್ಯವಿದೆ.

<><><>

**ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ**, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ, ಧಾರವಾಡ ಜಿಲ್ಲೆಯ, ಸಹಾಯಕ ಯೋಜನಾ ಸಮನ್ವಯಾಧಿಕಾರಿ, ರೇಣುಕಾ ಅಮಲಝರಿ.

<><><>

**2047ರ ವೇಳೆಗೆ, ಸುದೃಢಭಾರತ** ನಿರ್ಮಾಣದ ಸಂಕಲ್ಪದೊಂದಿಗೆ, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ, ರಾಜ್ಯ ಸಚಿವರಾದ, ಅನುಪ್ರಿಯಾ ಪಟೇಲ್, 60 ದಿನಗಳ, 'ತಂಬಾಕು ಮುಕ್ತ ಯುವ ಅಭಿಯಾನ 3.0'ಕ್ಕೆ, ಹೊಸ ದಿಲ್ಲಿಯಲ್ಲಿ ಚಾಲನೆ ನೀಡಿದ್ದಾರೆ. ಕೇಂದ್ರ ಶಿಕ್ಷಣ ಸಚಿವಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ತಂಬಾಕು ಉತ್ಪನ್ನಗಳ ಸೇವನೆ ತಡೆಗಟ್ಟಲು, ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ, ಯುವಜನತೆಗಾಗಿ, 'ತಂಬಾಕು ಬೇಡವೆಂದು ಹೇಳಿ' ಜಾಗೃತಿ ಅಭಿಯಾನಕ್ಕೆ, ಚಾಲನೆ ದೊರೆತಿದೆ.

<><><>

**ಜಾಗತಿಕ ಯುವ ತಂಬಾಕು ಸಮೀಕ್ಷೆ–ಜಿ.ವೈ.ಟಿ.ಎಸ್.** ವರದಿಯಂತೆ, 13 ರಿಂದ 15 ವರ್ಷದೊಳಗಿನ ವಿದ್ಯಾರ್ಥಿಗಳ ಪೈಕಿ, ಶೇಕಡ 8 ದಶಾಂಶ 4 ರಷ್ಟು ಹಾಗೂ ಸರಾಸರಿ 10 ವರ್ಷ ವಯೋಮಿತಿಯ ಮಕ್ಕಳಲ್ಲಿ, ತಂಬಾಕು, ಬೀಡಿ, ಸಿಗರೇಟ್ ಹಾಗೂ ಗುಟಖಾ ಸೇವನೆ, ಕಳವಳಕಾರಿ ಮಟ್ಟದಲ್ಲಿರುವುದು ತಿಳಿದುಬಂದಿದೆ. ಉತ್ತಮ ಆರೋಗ್ಯ ಹಾಗೂ 'ವೆಲ್‌ನೆಸ್ ಕಲ್ಚರ್' ಬಲಪಡಿಸಲು, ಕೇಂದ್ರದ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ದ್ವೈಮಾಸಿಕ ವಿವಿಧ ಸ್ಪರ್ಧೆಗಳು ಹಾಗೂ ಜನಜಾಗೃತಿ ಕಾರ್ಯಕ್ರಮಗಳಿಗೆ, ಚಾಲನೆ ನೀಡಿದೆ.

<><><>

**ಬಳ್ಳಾರಿ, ಶಿವಮೊಗ್ಗ, ರಾಯಚೂರು,** ಬೀದರ್ ಹಾಗೂ ಬೆಳಗಾವಿಯಲ್ಲಿ, ಕ್ಯಾನ್ಸರ್ ಚಿಕಿತ್ಸೆಗಾಗಿ, ಹೆಚ್ಚುವರಿ ಕೇಂದ್ರಗಳನ್ನು ಆರಂಭಿಸಲು, ಚಿಂತನೆ ನಡೆದಿದೆ ಎಂದು, ವೈದ್ಯಕೀಯ ಶಿಕ್ಷಣ ಖಾತೆ ಸಚಿವ, ಶರಣಪ್ರಕಾಶ ಪಾಟೀಲ ತಿಳಿಸಿದ್ದಾರೆ. ವಿಕಾಸ ಸೌಧದಲ್ಲಿ, ಕಿದ್ವಾಯಿ ಸ್ಮಾರಕ ಗಂಥಿ ಆಸ್ಪತ್ರೆಯ, ಪ್ರಗತಿ ಪರಿಶೀಲಿಸಿ, ಮಾತನಾಡಿದರು. ಮುಂಬರುವ ಕೆಲವೇ ತಿಂಗಳಲ್ಲಿ, ತುಮಕೂರು, ಮೈಸೂರು, ಮಂಡ್ಯ ಹಾಗೂ ಕಾರವಾರದಲ್ಲಿ, ಕ್ಯಾನ್ಸರ್ ಚಿಕಿತ್ಸಾ ಬಾಹ್ಯ ಕೇಂದ್ರಗಳು ಕಾರ್ಯಾರಂಭಿಸಲಿವೆ. ಕಲಬುರ್ಗಿಯಯಲ್ಲಿ, ಹೆಚ್ಚುವರಿಯಾಗಿ 210 ಹಾಸಿಗೆಗಳ, ಕ್ಯಾನ್ಸರ್ ಚಿಕಿತ್ಸೆ ಆಸ್ಪತ್ರೆ ಮೇಲ್ದರ್ಜೆಗೇರಿಸಲಾಗುವುದು, ಎಂದರು.

<><><>

**ನವ ಮಂಗಳೂರು ಬಂದರಿನಿಂದ,** 12 ನಾಟಿಕಲ್ ಮೈಲಿ ದೂರದಲ್ಲಿ, ಭಾರತೀಯ ಕರಾವಳಿ ಕಾವಲು ಪಡೆ, ಸಮರಾಭ್ಯಾಸ ನಡೆಸಿತು. 300ಕ್ಕೂ ಅಧಿಕ ಶಸ್ತ್ರ ಸಜ್ಜಿತ ಕರಾವಳಿ ಕಾವಲು ಪಡೆ ಸೈನಿಕರು, ಸುಸಜ್ಜಿತ ಕಣ್ಗಾವಲು ನೌಕೆ, ಅತ್ಯಾಧುನಿಕ ಹೆಲಿಕಾಪ್ಟರ್ ಹಾಗೂ ಇಂಟರ್‌ಸೆಪ್ಟರ್ ಬೋಟ್‌ಗಳ ಮೂಲಕ, ಸಮುದ್ರ ಮಧ್ಯದಲ್ಲಿ, ಸಮರ ಕವಾಯತು ಪ್ರದರ್ಶಿಸಿದರು. ಕರಾವಳಿ ಕಾವಲು ಪಡೆಯ ಉಪ ಮಹಾನಿರ್ದೇಶಕ ಪಿ.ಕೆ.ಮಿಶ್ರಾ, ಪೊಲೀಸ್ ಮಹಾ ನಿರ್ದೇಶಕ, ಪ್ರಣಬ್ ಮೊಹಾಂತಿ ಸೇರಿದಂತೆ, ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

<><><>

**ಕೇಂದ್ರದ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವಾಲಯದ,** 'ಮಾಯ್ ಭಾರತ್ ರಾಷ್ಟ್ರೀಯ ಸೇವಾ ಯೋಜನೆ ರಾಷ್ಟ್ರಪತಿ ಪ್ರಶಸ್ತಿ'ಗೆ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ, ಎನ್.ಎಸ್.ಎಸ್. ಸ್ವಯಂಸೇವಕ, ಸಂಜಯಕುಮಾರ ಬಿರಾದಾರ ಭಾಜನರಾಗಿದ್ದಾರೆ. ಅವರು, ಮೂಲತಃ ವಿಜಯಪುರ ಜಿಲ್ಲೆ ತೆಲಗಿ ಗ್ರಾಮದವರು. ಪ್ರಶಸ್ತಿ, ಒಂದು ಲಕ್ಷ ರೂಪಾಯಿ ನಗದು ಹಾಗೂ ಪ್ರಮಾಣಪತ್ರ ಒಳಗೊಂಡಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಹೊಸ ದಿಲ್ಲಿಯ ರಾಷ್ಟ್ರಪತಿ ಭವನದಲ್ಲಿ, ಜರುಗಿದ ಕಾರ್ಯಕ್ರಮದಲ್ಲಿ, ಪ್ರಶಸ್ತಿ ನೀಡಿ, ಗೌರವಿಸಿದರು.

<><><>

**ಕಲಬುರಗಿಯ ಸರ್ಕಾರಿ ಉಪಕರಣಾಗಾರ** ಹಾಗೂ ತರಬೇತಿ ಕೇಂದ್ರದ, 5ನೇ ಸೆಮಿಸ್ಟರ್ ವಿದ್ಯಾರ್ಥಿನಿ, ಅಂಕಿತಾ ಆಳಂದ, ವಿಶ್ವ ಕೌಶಲ ಮೆಕ್ಯಾನಿಕಲ್ ಕ್ವಾಡ್, ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಕೌಶಲಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, ಕಲ್ಯಾಣ ಕರ್ನಾಟಕ ಭಾಗದ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಸ್ಪರ್ಧೆಯಲ್ಲಿ, ಅವರು, ಪ್ರಥಮರಾಗಿ ಹೊರಹೊಮ್ಮಿದ್ದಾಗಿ, ಜಿ.ಟಿ.ಟಿ.ಸಿ. ಪ್ರಾಂಶುಪಾಲರಾದ ಸುಧಾರಾಣಿ ಅಟ್ನೂರ ತಿಳಿಸಿದ್ದಾರೆ.

<><><>

**ಕರ್ನಾಟಕ ರಾಜ್ಯೋತ್ಸವ, ಸಂತ ಶಿಶುನಾಳ ಷರೀಫ ಪ್ರಶಸ್ತಿಗೆ** ಭಾಜನರಾಗಿದ್ದ, ಆಕಾಶವಾಣಿ ಧಾರವಾಡ ಕೇಂದ್ರದ, ನಿವೃತ್ತ ಹಿರಿಯ ಉದ್ಘೋಷಕಿ, 'ಎ ಶ್ರೇಣಿ'ಯ ಖ್ಯಾತ ಸುಗಮ ಸಂಗೀತ ಗಾಯಕಿ, ಅನುರಾಧಾ ಧಾರೇಶ್ವರ, ನಿನ್ನೆ ಧಾರವಾಡದಲ್ಲಿ ನಿಧನರಾದರು. ಅವರಿಗೆ 87 ವರ್ಷ ವಯಸ್ಸಾಗಿತ್ತು. ಸುಗಮ ಸಂಗೀತ ಕ್ಷೇತ್ರದ ಸಾಧನೆಗಾಗಿ, ವಿಶ್ವ ಕೊಂಕಣಿ ಸಮ್ಮೇಳನದಲ್ಲಿ, ಸಮ್ಮಾನ್, ಕರ್ನಾಟಕ ಸಂಗೀತ, ನೃತ್ಯ ಅಕಾದೆಮಿ ಗೌರವ ಪ್ರಶಸ್ತಿ ಪುರಸ್ಕೃತರು ಹಾಗೂ ಕರ್ನಾಟಕ ಕಲಾ ತಿಲಕ ಬಿರುದಾಂಕಿತ, ಅನುರಾಧಾ ಧಾರೇಶ್ವರ ಅವರ ನಿಧನಕ್ಕೆ, ಗಣ್ಯರು ಸೇರಿದಂತೆ, ಆಕಾಶವಾಣಿ ಸಿಬ್ಬಂದಿ ವರ್ಗ ಕಂಬನಿ ಮಿಡಿದಿದೆ. ಪಾರ್ಥಿವ ಶರೀರದ ಅಂತ್ಯಕ್ರಿಯೆ, ಧಾರವಾಡದಲ್ಲಿ ನಿನ್ನೆ ಸಂಜೆ ಜರುಗಿತು.

<><><>

**1947 ರಲ್ಲಿ ಪ್ರಾರಂಭವಾದ,** ಧಾರವಾಡ ಕೃಷಿ ಮಹಾವಿದ್ಯಾಲಯ, ಅಕ್ಟೋಬರ್ 1, 1986 ರಲ್ಲಿ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವಾಗಿ, ನಾಮಕರಣಗೊಂಡಿತು. 39 ನೇ ಸಂಸ್ಥಾಪನಾ ದಿನಾಚರಣೆ, ಇಂದು ಬೆಳಗ್ಗೆ 11 ಗಂಟೆಗೆ, ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ ಜರುಗಲಿದೆ. ಕೃಷಿ ಖಾತೆ ಸಚಿವ, ಎನ್.ಚಲುವರಾಯಸ್ವಾಮಿ ಕಾರ್ಯಕ್ರಮ ಉದ್ಘಾಟಿಸುವರು ಎಂದು, ಉಪ ಕುಲಪತಿ ಪಿ.ಎಲ್. ಪಾಟೀಲ ತಿಳಿಸಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು**

- **ಇಂದು,ವಿಶ್ವ ಮಾನಸಿಕ ಆರೋಗ್ಯ ದಿನ;** ಮನೋಚೈತನ್ಯ ತಾಲೂಕು ಆಸ್ಪತ್ರೆ ಕ್ಲಿನಿಕ್‌ಗಳಲ್ಲಿ, ಮನೋ ಆರೋಗ್ಯ ಚಿಕಿತ್ಸಾ ಶಿಬಿರ.
- **ಮನೋದರ್ಪಣ ಪರಿಚರ್ಚಾ ವೆಬಿನಾರ್;** PM e-Vidya ಚಾನೆಲ್‌ನಲ್ಲಿ, ಪ್ರತಿ ಶುಕ್ರವಾರ ಮಧ್ಯಾಹ್ನ 2.30ಕ್ಕೆ ಪ್ರಸಾರ.
- **ಸುದೃಢಭಾರತ 2047;** 'ತಂಬಾಕು ಮುಕ್ತ, 60 ದಿನಗಳ ಯುವ ಅಭಿಯಾನ'ಕ್ಕೆ, ಕೇಂದ್ರ ಚಾಲನೆ.
- **ಮಂಗಳೂರು ಕಡಲ ತೀರದಲ್ಲಿ,** ಭಾರತೀಯ ಕರಾವಳಿ ಕಾವಲು ಪಡೆ, ಯಶಸ್ವಿ ಸಮರಾಭ್ಯಾಸ.

<><><>